# ವಾರ್ಡ್ ಸಭೆ ಸಂಖ್ಯೆ.51

ದಿನಾಂಕ:03.02.2023 ರಂದು ಸಮಯ 11:30 ಗಂಟೆಗೆ ವಾರ್ಡ್.ಸಂಖ್ಯೆ.50 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಕಾರ್ಯದರ್ಶಿಗಳು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

<u>ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು</u>

1. ಶ್ರೀ ಎಸ್.ಆರ್ ಶ್ರೀನಿವಾಸ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.50, ಮಾರಪ್ಪನಪಾಳ್ಯ. **(ಅಧ್ಯಕ್ಷರು)**
2. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.50, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
3. ಶ್ರೀ ಜಿ.ಕೆ ವೆಂಕಟೇಶ್ ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
4. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
5. ಶ್ರೀ ಓಂಪ್ರಕಾಶ್ ತೋಟಗಾರಿಕೆ ಅಧೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
6. ಶ್ರೀ ಮಹದೇವ ಗುತ್ತಿಗೆದಾರರು ಬೀದಿ ದೀಪ ಬಿ.ಬಿ.ಎಂ.ಪಿ
7. ಶ್ರೀ ದಿನೇಶ್ ಕುಮಾರ್ ಸ.ಅ. (ಬೆಸ್ಕಾಂ)
8. ಶ್ರೀ. ಗೋಪಿ, ಸದಸ್ಯರು
9. ಶ್ರೀ. ಛಾಯಾಪತಿ ಎಂ. ಕಿರಿಯ ಆರೋಗ್ಯ ಪರಿವೀಕ್ಷಕರು, ಬಿಬಿಎಂಪಿ
10. ಶ್ರೀ. ಪುಟ್ಟಸ್ವಾಮಿ ಸದಸ್ಯರು,
11. ಶ್ರೀ ವೈ.ಆರ್. ವೆಂಕಟೇಶ್ ಸದಸ್ಯರು,
12. ಶ್ರೀ ಜಯಪಾಲ್, ಸದ್ಯಸರು

ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 01 | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 02 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 03 | ವಿಜಯಾನಂದನಗರ ಮುಖ್ಯರಸ್ತೆಯಲ್ಲಿರುವ ಆಂಜನೆಯಸ್ವಾಮಿ ದೇವಸ್ಥಾನದ ಬಳಿ ಇರುವ ಮನೆಗೆ ನೀರಿನ ಬಿಲ್ಲು ಹೆಚ್ಚಾಗಿ ಬಂದಿರುವುದರಿಂದ ಕಾರಣವೇನು ಎಂಬುದಕ್ಕೆ ಮಾಹಿತಿ ನೀಡಲು ಡಾ॥ ನಾಗೇಂದ್ರ ಕೋರಿರುತ್ತಾರೆ. ಇದರ ಬಗ್ಗೆ ಶ್ರೀ.ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಮುಂದಿನ ಸಭೆಗೆ ಸದರಿ ವಿಷಯದ ಬಗ್ಗೆ ವಿಸ್ತ್ರತವಾದ ವರದಿಯನ್ನು ಸಲ್ಲಿಸಲಾಗುವುದು ಎಂದು ಸಭೆಗೆ ತಿಳಿಸಿದರು. | ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು |
| 04 | ಕಣ್ವ ಆಸ್ಪಿಟಲ್ ರಸ್ತೆ ಮತ್ತು ಟಯೋಟಾ ಶೋ ರೂಂ ರಸ್ತೆಗಳಲ್ಲಿ ವಾಹನಗಳನ್ನು ರಸ್ತೆಯ ಬದಿಯಲ್ಲಿಯೆ ನಿಲ್ಲಿಸಿರುವುವುದನ್ನು ತೆರವುಗೊಳಿಲು ಸಭೆಗೆ ಡಾ॥ನಾಗೇಂದ್ರರವರು ಮತ್ತು ಸಾರ್ವಜನಿಕರು ಕೋರಿದರು. ಅದಕ್ಕೆ ಸಂಬಧಪಟ್ಟ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ಮಾಹಿತಿ ನೀಡಲಾಗುವುದು ಎಂದು ತಿಳಸಿದರು | ಮುಂಬರುವ ಸಭೆಗೆ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. |
| 05 | ಸಂಚಾರಿ ಪೋಲೀಸ್ ಠಾಣೆ ಯಶವಂತಪುರರವರಿಗೆ ಕಿಯಾ ಮೋಟರ್ಸ್ ಬಳಿ ನೋ–ಪಾರ್ಕಿಂಗ್ ಬೋರ್ಡ್ ಅಳವಡಿಸಲು ಎಲಿನಾ ವಸತಿ ಗೃಹದ ನಿವಾಸಿಗಳು ಕೋರಿರುತ್ತಾರೆ | ಯಶವಂತಪುರ ಸಂಚಾರಿ ಪೋಲೀಸ್ ಠಾಣೆ |

| | | |
|---|---|---|
| 06 | ಕೃಷ್ಣಾನಂದನಗರ ವೃತ್ತದಲ್ಲಿ ಸಾಯಂಕಾಲ ಶಾಲೆ ಬಿಟ್ಟಾಗ ವಾಹನ ದಟ್ಟಣೆಯಿಂದ ಮಕ್ಕಳು ರಸ್ತೆ ದಾಟಲು ತುಂಬಾ ತೊಂದರೆ ಆಗುತ್ತಿರುವುದರಿಂದ ಸಂಬಂಧಪಟ್ಟ ಸಂಚಾರಿ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ಮಾಹಿತಿ ನೀಡಬೇಕೆಂದು ಬಿ.ಆರ್. ಪುಟ್ಟಸ್ವಾಮಿ ಸಭೆಗೆ ಕೋರಿರುತ್ತಾರೆ | ರಾಜಾಜಿನಗರ ಸಂಚಾರಿ ಠಾಣೆ |
| 07 | ಶಂಕರನಗರ ಮುಖ್ಯರಸ್ತೆ ಅಶೋಕ ಹೈಟ್ಸ್ ಬಳಿ ಇರುವ ಬೆಸ್ಕಂ ಟ್ರಾನ್ಸ್‌ಫರಂನ್ನು ಸ್ಥಳಾಂತರಿಸಲು ಡಾ॥ನಾಗೇಂದ್ರರವರು ಕೋರಿರುತ್ತಾರೆ ಅದಕ್ಕೆ ಪೂರಕವಾಗಿ ಮುಂಬರುವ ಸಭೆಗೆ ಸಂಪೂರ್ಣ ಲಿಖಿತ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. | ಬೆಸ್ಕಂ ಇಲಾಖೆ |
| 08 | ವಾರ್ಡ್ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆ ಬಗ್ಗೆ ಮಹಿತಿಯನ್ನು ಡಾ॥ನಾಗೇಂದ್ರರವರು ಸಭೆಗೆ ಕೋರಿರುತ್ತಾರೆ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮುಂಬರುವ ಸಭೆಗೆ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. | ತೋಟಗಾರಿಕೆ ಇಲಾಖೆ |
| 09 | ಕಾರ್ಯದರ್ಶಿಗಳು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನಗಳನ್ನು ಹೇಳುತ್ತ ಸಭೆಯನ್ನು ಮುಕ್ತಾಯಗೊಳಿಸಿದರು. | – |

ನೋಡಲ್ ಅಧಿಕಾರಿ

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.50
ಮಾರಪ್ಪನಪಾಳ್ಯ